ಪ್ರತಿಬಿಂಬ
PRATIBIMBA – Multidisciplinary Kannada Research Journal of IIMRD
ISSN: 2582-2284
Vol-1 Issue 3, Nov-Dec 2019, 6-9
©IIMRD, Mysuru
IIMRD JOURNALS
www.iimrd.com

# ದಕ್ಷಿಣ ಕನ್ನಡ ಜಿಲ್ಲೆಯ ಮುಗೇರ ಸಮುದಾಯ

ಡಾ. ಆರ್. ಚಂದ್ರಶೇಖರ್[1]

**ಪೀಠಿಕೆ**

ಮುಗೇರ ಸಮುದಾಯದ ಬಗ್ಗೆ ನಡೆಸಿದ ಅಧ್ಯಯನಗಳು ತೀರಾ ವಿರಳ. ಬ್ರಿಟೀಷ್ ಆಡಳಿತದಲ್ಲಿ ಹಲವಾರು ಜಾತಿಗಳ ಬಗ್ಗೆ ಅನೇಕ ಗ್ರಂಥಗಳನ್ನು ಪ್ರಕಟಿಸಲಾಯಿತಾದರೂ ಈ ಜನಸಮುದಾಯದ ಬಗ್ಗೆ ಥರ್ಸ್ಟನ್ನ್‌ರಾಗಲೀ, ನಂಜುಂಡಯ್ಯರಾಗಲಿ ಅಥವಾ ಅನಂತಕೃಷ್ಣ ಅಯ್ಯರ್‌ರಾಗಲೀ ಯಾವುದೇ ವಿವರಗಳನ್ನು ನೀಡಿಲ್ಲ. ಆದ್ದರಿಂದ ಸಂಶೋಧಕರು ಈ ಸಮುದಾಯದ ಬಗ್ಗೆ ಆಸಕ್ತಿವಹಿಸಿ ಪ್ರಸ್ತುತ ಲೇಖನವನ್ನು ಸಿದ್ಧಪಡಿಸಿದ್ದಾರೆ.

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಮೊಗೇರರ ನಿಜವಾದ ಹೆಸರು ಮುಗೇರ, ಮುಗ್ಗೆರ್ಲು ಅಥವಾ ಮೇರ ಎಂಬುದಾಗಿದೆ. ಅವರಿಗೆ ಮೊಗೇರ ಎಂಬ ಹೆಸರನ್ನು ಕೊಟ್ಟಿರುವುದು ಬಹುಶಃ ಸರ್ಕಾರಿ ಅಧಿಕಾರಿಗಳು. 1950ರ ದಶಕದ ಆದಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆ (ಈಗಿನ ಉಡುಪಿ ಜಿಲ್ಲೆಯು ಸೇರಿದಂತೆ) ಮತ್ತು ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲೂಕು ಸಹ ಮದ್ರಾಸಿನ ಭಾಗವಾಗಿತ್ತು. ಈ ಎರಡು ಭಾಗಗಳ ಕನ್ನಡ ಪ್ರದೇಶಗಳು 'ಮೊಗೇರ' ಎಂಬ ಜಾತಿಯನ್ನು ಪರಿಶಿಷ್ಟಜಾತಿ ಪಟ್ಟಿಯಲ್ಲಿ ಸೇರಿಸಿ ಈ ಎರಡೂ ಪ್ರದೇಶಗಳಲ್ಲಿ ಅವರು ಮೀಸಲಾತಿ ಸೌಲಭ್ಯವನ್ನು ಪಡೆಯಬಹುದೆಂದು ಆದೇಶಿಸಲಾಯಿತು. ಆದರೆ ವಾಸ್ತವವಾಗಿ ಕೊಳ್ಳೇಗಾಲ ತಾಲೂಕಿನಲ್ಲಿ ಮೊಗೇರ ಎಂಬ ಜಾತಿಯ ಯಾವ ಜನರು ಕಾಣಸಿಗುವುದಿಲ್ಲ. 1956ರಲ್ಲಿ ರಾಜ್ಯಗಳ ಪುನರ್‌ವಿಂಗಡನೆಯಿಂದಾಗಿ ಮೈಸೂರು ರಾಜ್ಯ ಸ್ಥಾಪನೆಯಾದಾಗ ಹಿಂದಿನದ್ದನ್ನೆ ಮುಂದುವರಿಸಲಾಯಿತು. ಅಂದರೆ ಆಗಿನ ಮೈಸೂರು ರಾಜ್ಯದ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲೂಕಿನಲ್ಲಿ 'ಮೊಗೇರ' ಎಂಬ ಜಾತಿಯವರು ಪರಿಶಿಷ್ಟ ಜಾತಿಯವರೆಂದು ಪ್ರಕಟಿಸಲಾಯಿತು. 1990ರ ದಶಕದ ನಂತರವಷ್ಟೆ ನಮಗೆ ಮೊಗೇರರ ಬಗ್ಗೆ ಕೆಲವು ಲೇಖನಗಳು ಮತ್ತು ಗ್ರಂಥಗಳು ಸಿಗುತ್ತವೆ. 1990ರ ಸುಮಾರಿಗೆ ಭಾರತೀಯ ಮಾನವ ಸರ್ವೇಕ್ಷಣ ಸಂಸ್ಥೆಯವರು (Anthropological Survey of India) ಭಾರತದ ಎಲ್ಲಾ ಜಾತಿಗಳ ಕುರಿತು ಅಧ್ಯಯನ ನಡೆಸಿ ಸಿಂಗ್(1998) ರವರ ಸಂಪಾದಕತ್ವದಲ್ಲಿ ಒಂದು ಬೃಹತ್ ಗ್ರಂಥವನ್ನು ಪ್ರಕಟಿಸಿದ್ದಾರೆ. India's communities ಎಂಬ ಈ ಪುಸ್ತಕದಲ್ಲಿ ಮೋಗೇರ ಸ್ಥಳೀಯ ಹೆಸರು 'ಮಾಗ್ರೇರ' ಎಂದು ಬರೆಯಲಾಗಿದೆ. ಇಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಮಾಗವೀರ (ಮೀನುಗಾರರು) ಜಾತಿಗಿಂತ ಉತ್ತರಕನ್ನಡ

[1] *ಅತಿಥಿ ಉಪನ್ಯಾಸಕರು, ಮಾನವಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.*

ಮೊಗೇರ (ಮೀನುಗಾರರು) ಜಾತಿ ಬೇರೆಯಾದ ಜಾತಿ ಎಂದು ತಿಳಿಸಿದ್ದಾರೆ. ಈ ಜಾತಿಯ ಕೆಲವು ಲಕ್ಷಣಗಳನ್ನು ಬಹಳ ಸಂಕ್ಷಿಪ್ತವಾಗಿ ಲೇಖಕರು ವಿವರಿಸಿರುತ್ತಾರೆ.

ಮುಗೇರ ಎಂಬ ಹೆಸರು ಹೆಚ್ಚಿನ ಬಳಕೆಯಲ್ಲಿದೆ ಆದರೆ ಧರ್ಮಸ್ಥಳ, ಬೆಳ್ತಂಗಡಿ, ಪುತ್ತೂರು, ಸುಳ್ಯ ಮತ್ತು ಬಂಟ್ವಳ ಸ್ಥಳಗಳಲ್ಲಿ 'ಮೇರ' ಎಂಬ ಹೆಸರನ್ನು ಈ ಜಾತಿಯವರು ಹೆಚ್ಚಾಗಿ ಬಳಸುತ್ತಾರೆ. ಮುಗೇರರ (ಮೇರ) ಮಾತೃಭಾಷೆ ತುಳು, ತುಳು ಭಾಷೆಯಲ್ಲಿ ಅವರನ್ನು 'ಮುಗ್ಗೆರ್ಲು' ಎಂದು ಕರೆಯುತ್ತಾರೆ. ಮುಗ್ಗೆಲ ಎಂದರೆ ತುಳು ಭಾಷೆಯಲ್ಲಿ ಮೊಲ ಎಂಬ ಅರ್ಥ ಬರುತ್ತದೆ. ಹಿಂದಿನ ಕಾಲದಲ್ಲಿ ಈ ಜನರು ಮೊದಲ ಬೇಟೆಯನ್ನು ಮಾಡುತ್ತಿದ್ದರು ಎಂಬುದು ಕಂಡು ಬರುತ್ತದೆ. ಹೆಚ್ಚಿನ ಗಂಡಸರು ತಮ್ಮ ಹೆಸರಿನೊಂದಿಗೆ ಮುಗೇರ ಅಥವಾ ಮೇರ ಎಂಬ ಉಪನಾಮವನ್ನು ಬರೆದಿರುತ್ತಾರೆ. ಜೊತೆಗೆ ಇವರ ದೈವವು ಮುಗ್ಗೇರ್ಲು ದೈವ (ಭೂತ) ಕುಲದೇವತೆಯಾಗಿದೆ.

**ಮುಗೇರರ ವಾಸಸ್ಥಳ**

ಮುಗೇರರು ಮೂಲ ವಾಸಸ್ಥಳಗಳು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿವೆ. ಹೆಚ್ಚಾಗಿ ಇವರು ಗ್ರಾಮೀಣ ಪ್ರದೇಶಗಳಲ್ಲಿ ತಾವು ಹೊಂದಿರುವ ಚಿಕ್ಕ ನಿವೇಶನಗಳಲ್ಲಿರುವ ಅಥವಾ ಅಲ್ಪ ಪ್ರಮಾಣದ ದರ್ಖಸ್ಸು ಜಮೀನಿನಲ್ಲಿರುವ ಚಿಕ್ಕ ಮನೆಗಳಲ್ಲಿ ವಾಸಿಸುತ್ತಾರೆ. ಒಂದು ಊರಿನಲ್ಲಿ ಒಂದು ಅಥವಾ ಎರಡು ಮನೆಗಳು ಇರುವುದೇ ಜಾಸ್ತಿ. ಕೆಲವು ಪ್ರದೇಶಗಳಲ್ಲಿ 25–30 ಮನೆಗಳು ಇರುತ್ತವೆ. ಇವರು ಕೇರಳ ರಾಜ್ಯದ ಕಾಸರಗೋಡು ಜಿಲ್ಲೆಯಲ್ಲಿಯೂ ಕೂಡ ಕಂಡು ಬರುತ್ತಾರೆ. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಕೆಂಚಾಡಿ, ಸುಳ್ಯ, ಪುತ್ತೂರು, ಕಾಬೆಟ್ಟು, ಮಂಚಗಾಲು, ಬೆಳ್ಮಣ್ಣು, ಕಟೀಲ್, ಮೂಡಬಿದ್ರೆ, ಬಜ್ಪೆ, ಬೆಳ್ತಂಗಡಿ, ಅಲಂಗಾರು, ಗುರುವಾಯಿನಕೆರೆ, ಪುಳಂತ್ತುರು, ಪಲ್ಲಮಜಲು, ರಾಮಲುಕಟ್ಟಿ, ಪೆರ್ಬಾಜೆ, ದೇವರಗುಡ್ಡ ಅತ್ತೂರ್, ಹೆಬ್ರಿ, ಲೈಲಾ, ಕೋಯುರು, ಸವಣಾಲ್, ಮುಂತಾದ ಊರುಗಳಲ್ಲಿ ವಾಸವಾಗಿದ್ದಾರೆ.

ಮುಗೇರರ ಮಾತೃಭಾಷೆ ತುಳು ಆಗಿದೆ. ಬಂಟರು, ಬಲ್ಲವರು, ದೇವಾಡಿಗಳು ಇತ್ಯಾದಿ ಜಾತಿಗಳ ಜನರು ಸಹ ತುಳು ಭಾಷೆಯನ್ನು ಮಾತೃ ಭಾಷೆಯಾಗಿ ಆಡುತ್ತಾರೆ. ಹಿಂದಿನಿಂದಲೂ ಅವಿಭಕ್ತ ಕುಟುಂಬಗಳೇ ಆದರ್ಶವಾದುದೆಂದು ಮುಗೇರರು ನಂಬಿದ್ದಾರೆ.

ಆದರೆ ಇತ್ತೀಚೆಗೆ ವಿಭಕ್ತ ಕುಟುಂಬಗಳು ಹೆಚ್ಚಾಗುತ್ತಿವೆ. ಉದ್ಯೋಗವನ್ನು ಅರಸಿಕೊಂಡು ವಲಸೆ ಹೋಗಬೇಕಾಗಿರುವುದರಿಂದ ವಿಭಕ್ತ ಕುಟುಂಬಗಳು ಹೆಚ್ಚಾಗಲು ಕಾರಣವಿರಬಹುದು. ಕುಟುಂಬ ಆಸ್ತಿಯಲ್ಲಿ ಹಕ್ಕಿರುವುದು ಗಂಡು ಮಕ್ಕಳಿಗೆ ಪಿತೃ ಅನುವಂಶೀಯ (Patrilineal inheritance) ರೂಢಿಯಲ್ಲಿದೆ.

**ಸ್ತ್ರೀಯರ ಸ್ಥಾನಮಾನಗಳು**

ಕಾನೂನಿನಲ್ಲಿ ಸ್ತ್ರೀಯರಿಗೆ ಸಮಾನ ಹಕ್ಕು ಇದ್ದರೂ ಕುಟುಂಬ ಆಸ್ತಿಯಲ್ಲಿ ಅವರಿಗೆ ಪಾಲು ಕೊಡುವುದಿಲ್ಲ. ಸ್ತ್ರೀಯರು ಗಂಡಸರಂತೆಯೇ ಕೂಲಿ ಕೆಲಸವನ್ನು ಮಾಡುತ್ತಾರೆ. ಅಲ್ಲದೆ ಬೀಡಿ ಕಟ್ಟುವ

ಕೆಲಸವನ್ನು ಅನೇಕ ಹೆಂಗಸರು ಮತ್ತು ಮಕ್ಕಳು ಮಾಡುತ್ತಾರೆ. ಆದ್ದರಿಂದ ಸ್ತ್ರೀಯರ ಆರ್ಥಿಕ ಸ್ಥಾನಮಾನವು ಗಂಡಸರ ಸ್ಥಾನಮಾನಕ್ಕಿಂತ ಕಡಿಮೆ ಏನಿಲ್ಲ. ಸ್ತ್ರೀಯರ ದುಡಿಯುವ ಹಣದಿಂದಲೇ ಹೆಚ್ಚಿನ ಕೌಟುಂಬಿಕ ಖರ್ಚುಗಳನ್ನು ನಿಭಾಯಿಸಲಾಗುತ್ತದೆ.

**ಜೀವನ ಚಕ್ರ ವಿಧಿಗಳು**

ಜನನಕ್ಕೆ ಸಂಬಂಧಿಸಿದಂತೆ ಮಗು ಹುಟ್ಟಿದ 16ನೇ ದಿನಕ್ಕೆ ಸೂತಕ ತೆಗೆಯುವ ವಿಧಿಯನ್ನು ನೆರವೇರಿಸುತ್ತಾರೆ. ಅದೇ ದಿನ ತೊಟ್ಟಿಲುಶಾಸ್ತ್ರದ ವಿಧಿಯನ್ನು ಮಾಡುತ್ತಾರೆ. ಮಗುವಿನ ನಾಮಕರಣವನ್ನು ಅಂದು ಮಾಡಲಾಗುವುದು. (ಆಮೆ ಮಾಡುವುದು) ತಂದೆ ಮತ್ತು ತಾಯಿ ಇಬ್ಬರೂ ಮಗುವಿನ ಕಿವಿಯಲ್ಲಿ ಹೆಸರನ್ನು ಹೇಳುತ್ತಾರೆ. ತೊಟ್ಟಿಲು ತರುವುದು ಮಗುವಿನ ಸೋದರ ಮಾವನ ಕರ್ತವ್ಯವಾಗಿರುತ್ತದೆ. ಹೆಣ್ಣು ಮಕ್ಕಳು ಋತುಮತಿಯಾದಾಗ ಸೋದರ ಮಾವನು ಅವನಿಗೆ/ಅವಳಿಗೆ ಒಂದು ಸಣ್ಣ ಗುಡಿಸಲನ್ನು ಮನೆಯ ಹತ್ತಿರ ಕಟ್ಟಿ ಕೊಡಬೇಕು. ಮರಣ ಹೊಂದಿದ ವ್ಯಕ್ತಿಯನ್ನು ಹೂಳುವ ಪದ್ಧತಿ ಮುಗೇರರಲ್ಲಿದೆ. ಹೆಣಕ್ಕೆ ಸ್ನಾನ ಮಾಡಿಸಿ ಹೊಸ ಬಟ್ಟೆಗಳನ್ನು ತೊಡಿಸಿ ಪೂಜೆ ಮಾಡಿ ನಂತರ ಅದನ್ನು ಹೂಳುತ್ತಾರೆ.

**ಸಾಮಾಜಿಕ ನಿಯಂತ್ರಣದ ವಿಧಾನಗಳು**

ಮುಗೇರರಲ್ಲಿ ಜಾತಿ ಸಭೆಗಳು ಜಾತಿ ಪಂಚಾಯಿತಿಗಳು ಮತ್ತು ಇತರ ಸಂಘ ಸಂಸ್ಥೆಗಳು ಕಂಡು ಬರುತ್ತವೆ. ಇವರು ಊರಿನ ಮುಖಂಡರನ್ನು 'ಗುರಿಕಾರ'ರೆಂದು ಕರೆಯುತ್ತಾರೆ. ಇವರನ್ನು ಶಪಾಡ ಮತ್ತು ಉರುದಾಯ ಎಂದು ಕರೆಯುವ ವಾಡಿಕೆಯಿದೆ. ಅನೇಕ ಪೂಜೆ ಮತ್ತು ಧಾರ್ಮಿಕ ವಿಧಿಗಳನ್ನು ನೆರವೇರಿಸುವರು.

**ಧಾರ್ಮಿಕ ಜೀವನ**

ಮುಗೇರರ ಧಾರ್ಮಿಕ ನಂಬಿಕೆಗಳು ಮತ್ತು ಆಚರಣೆಗಳು ವಿಶಿಷ್ಟವಾಗಿದೆ. ಅವರು ದೇವರು ಮತ್ತು ದೈವಗಳನ್ನು (ಭೂತ) ಆರಾಧಿಸುತ್ತಾರೆ. ಮಂತ್ರ ದೇವತೆ ಮತ್ತು ದುರ್ಗಾಪರಮೇಶ್ವರಿ ಕುಟುಂಬಗಳಲ್ಲಿ ಪೂಜಿಸುವ ದೇವರುಗಳು. ಗುಳಿಗ ಪಂಜುರ್ಲಿ ಮುಗೇರ (ಮುಗ್ಗೆರ್ಲು) ಮುಂತಾದವುಗಳು. ಉಡುಪಿ, ಧರ್ಮಸ್ಥಳ, ಕಟಿಲು ಮುಖ್ಯವಾದ ಯಾತ್ರಾ ಸ್ಥಳವಾಗಿದೆ.

**ಆಹಾರ ಪದ್ಧತಿ**

ಮುಗೇರರು ಮಾಂಸಾಹಾರಿಗಳು. ಅವರು ಸಾಕಷ್ಟು ಪದಾರ್ಥಗಳನ್ನು ಸೇವಿಸುತ್ತಾರೆ. (ಕೋಳಿಮಾಂಸ) ಕುಚಲಕ್ಕಿ ಪ್ರದಾನವಾದ (staple diet) ಆಹಾರವಾಗಿದೆ. ಮದ್ಯ ಸೇವನೆ, ಹಾಗೂ ಚಹಾ ಸೇವನೆ ಪ್ರಮುಖವಾಗಿ ಗಂಡಸರಲ್ಲಿ ಕಂಡುಬರುತ್ತದೆ.

**ಉಪಸಂಹಾರ**

ಒಟ್ಟಾರೆ ಇವರ ಜೀವನ ಪದ್ಧತಿ ಇತರರಂತೆ ಕಂಡರೂ ಕೂಡ ಸೂಕ್ಷ್ಮವಾಗಿ ಅವಲೋಕಿಸಿದಾಗ ವಿಶಿಷ್ಟತೆಯಿಂದ ಕೂಡಿರುತ್ತದೆ. ಇವರ ಆರ್ಥಿಕ ಜೀವನಕ್ಕೆ ಭೂಮಿಯೇ ಮುಖ್ಯ ಮೂಲ ಸಂಪತ್ತಾಗಿದೆ. ಇವರಿಗೆ ಸಾಮಾನ್ಯವಾಗಿ ಕೃಷಿ ಭೂಮಿಯಿಲ್ಲ. ಸಾಮಾನ್ಯವಾಗಿ ಕೂಲಿಯನ್ನೆ ಆಧರಿಸಿ ಜೀವನ ನಡೆಸುತ್ತಿದ್ದಾರೆ. ಇತ್ತೀಚಿನ ದಿನಗಳಲ್ಲಿ ಕೆಲವು ವಿದ್ಯಾವಂತ ಮುಗೇರರು ಸರ್ಕಾರಿ ಕೆಲಸವನ್ನು ಪಡೆಯುವಲ್ಲಿ ಸಫಲರಾಗಿದ್ದಾರೆ. ಇವರು ವಾಸಿಸುವ ಹೆಚ್ಚಿನ ಕಾಲೊನಿಗಳಲ್ಲಿ ಮೂಲಭೂತ ಸೌಕರ್ಯಗಳು ಸಮರ್ಪಕವಾಗಿಲ್ಲದಿರುವುದು ಸಮಾಜದ ವ್ಯಂಗವೆಂದರೆ ತಪ್ಪಾಗಲಾರದು.

**ಪರಾಮರ್ಶನ ಗ್ರಂಥಗಳು**


- ಕಾಪ್ರಾಡಿ, ಅಭಯ್ ಕುಮಾರ್. (1997). ಮುಗೇರರು : ಜನಾಂಗ–ಜನಪದ ಅಧ್ಯಯನ. ಕನ್ನಡ ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.
- ಪುಣಿಂಚಿತ್ತಾಯ, ವೆಂಕಟರಾಜ. (1993). ಮಾಗವೀರು ಸಂಸ್ಕೃತಿ. ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
- Kamath S.U.(1985). Uthara Kannada District-Karnataka State Gazetteer, Gazetteer department, Bangalore.
- Singh K.S. (1996). Communities, Synonyms, Segments, Surnames and Tribes. Oxford University Press, New Delhi.
- Singh K.S. (1998). India's Communities. Oxford University Press, Delhi.
- Thurston E. (1909). Caste and Tribes of Southern India. Cosmos publication, Delhi.